**CC 106-2025 NI ACT**
**FURTHER CROSS OF PW 1.doc**

ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **16.02.2026** ರಂದು ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲು**:** ಆರೋಪಿತರ ಪರಃ ವಕೀಲರ ಮೂಲಕ ಃ

ಮನೆ ಕಾಮಗಾರಿಯು ಮುಕ್ತಾಯವಾಗುತ್ತಿದ್ದು, ಆದ್ದರಿಂದ ಸಾಲ ಬೇಕೆಂದು ಆರೋಪಿಯು ಕೇಳಿರುತ್ತಾರೆ. ಬೇರೆ ಉದ್ದೇಶಕ್ಕೆ ಆರೋಪಿಯು ಸಾಲವನ್ನು ಕೇಳಿರುವುದಿಲ್ಲ. ನೋಟೀಸ್ ತಯಾರು ಮಾಡಲು ವಕೀಲರಿಗೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ನಾನು ಚೆಕ್‌ನ್ನು ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ. ನಿಪಿ 3 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿಯು ನೀಡಿರುತ್ತಾರೆ ಎಂದು ಹೇಳುವ ಚೆಕ್ ಈಗ ನೋಡುತ್ತಿರುವ ನಿಪಿ 1 ಆಗಿರುತ್ತದೆ. ನಿಪಿ 1 ರಲ್ಲಿ ಇರುವ ಸಹಿ ಮತ್ತು ಒಕ್ಕಣೆ ಬೇರೆ ಇಂಕುಗಳಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಇರುವ 10 ಸಾವಿರ ಎಂದು ಬರೆದಿರುವ ಸಂಖ್ಯೆಯಲ್ಲಿ ಕೊನೆಯ ಸೊನ್ನೆಯನ್ನು ಆ ನಂತರ ಬೇರೆ ಇಂಕಿನಲ್ಲಿ ಬರೆಯಲಾಗಿದೆ ಎಂದರೆ ಆರೋಪಿ ಕೊಟ್ಟದ್ದನ್ನು ನಾನು ಪಡೆದಿರುತ್ತೇನೆ. ಅದರಲ್ಲಿ ಬರೆದಿರುವ ಸೊನ್ನೆಗಳಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನೋಟೀಸ್‌ನಲ್ಲಿ ದಿನಾಂಕವನ್ನು ಮಾತ್ರ ಆರೋಪಿಯು ಬರೆದುಕೊಟ್ಟಿರುತ್ತಾರೆ ಎಂದು ಹೇಳಿದ್ದು, ಉಳಿದ ಒಕ್ಕಣೆಯನ್ನು ಯಾರು ಬರೆದಿರುತ್ತಾರೆ ಎಂದು ಸಾಕ್ಷಿಗೆ 2-3 ಬಾರಿ ಕೇಳಲಾಗಿ ನಾನು ಬರೆಯಲು ಆಗುತ್ತದೆಯೇ ನನ್ನ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸಾಲದ ಮೊತ್ತವನ್ನು ಮರುಪಾವತಿ ಮಾಡುವಂತೆ ನಮ್ಮ ಮನೆಯ ಬಳಿ ಬಂದಿರುವಾಗ ಹೇಳಿರುತ್ತೇನೆ.

ಮುಂದಿನ ಪಾಟೀ ಸವಾಲಿಗೆ ಸಮಯನೀಡಿ**,** ಮುಂದೂಡಲಾಯಿತು**.**

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು**.**

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ**.**